ನಡೆದಿದ್ದ. ಲೇಪಾಕ್ಷಿಯ ಜೊತೆ ಒಂದು ಗಂಟೆ ಕುಳಿತು ಎಂಟು ಗಂಟೆಯ ಬೆಂಗಳೂರು ಬಸ್ಸು ಹತ್ತುವ ಲೆಕ್ಕಾಚಾರ ಹಾಕಿದ್ದ ಪೆಂಚಾಲಯ್ಯ. ಹಾಗೆ ಮಾಡಿದರೆ ಹತ್ತೂವರೆಗೆಲ್ಲ ಮನೆ ಸೇರಬಹುದಿತ್ತು. ಆಗಲೇ ಲೇಪಾಕ್ಷಿ ಶಂಕರ್ ಬಾರ್ ಮುಂದೆ ನಿಂತಿದ್ದ. ಇಬ್ಬರೂ ಒಳಗೆ ಹೋಗಿದ್ದರು. ಲೇಪಾಕ್ಷಿ ಒಂದೂವರೆ ಕ್ವಾರ್ಟರ್ ಮ್ಯಾಕ್ಡವಲ್ ವಿಸ್ಕಿ ಮತ್ತು ಎರಡು ಪ್ಲೇಟ್ ಚಿಲ್ಲಿ ಚಿಕನ್ನನ್ನು ಸಲೀಸಾಗಿ ಇಳಿಸಿದ್ದ. ಪೆಂಚಾಲಯ್ಯ ಒಂದು ಬಿಯರ್ ಕುಡಿದವನು ಒಂದು ಪ್ಲೇಟ್ ಎಗ್ ಬುರ್ಜಿಯನ್ನು ನಂಜಿಕೊಂಡಿದ್ದ. ಬುಧವಾರ ಮೇಷ್ಟ್ರನ್ನು ಕಾರಿನಲ್ಲಿ ಕರೆದುಕೊಂಡು ಬರುವ ಭಾರವನ್ನು ಲೇಪಾಕ್ಷಿಯ ಮೇಲೆ ಹೊರಿಸಿ ಆರು ಸಾವಿರ ರೂಪಾಯಿ ಕೊಟ್ಟು, ಮೇಷ್ಟ್ರುಗೆ ಅಂತ ಒಂದು ಕ್ವಾರ್ಟರ್ ಮ್ಯಾನ್ಷನ್ ಹೌಸ್ ಬ್ರಾಂದಿ ಕೊಡಿಸಿ, ಬೆಂಗಳೂರಿಗೆ ಬಂದಾಗ ಸಪರೇಟಾಗಿ ಐದು ಸಾವಿರ ಕೊಡುವುದಾಗಿ ಲೇಪಾಕ್ಷಿಗೆ ಹೇಳಿ ಎಂಟು ಗಂಟೆ ಬೆಂಗಳೂರು ಬಸ್ಸು ಹತ್ತಿದ ಪೆಂಚಾಲಯ್ಯ ತಾನು ಮಾಡಿದ ತಂತ್ರಕ್ಕೆ ತಾನೇ ಮೆಚ್ಚುಗೆ ಪಟ್ಟುಕೊಂಡಿದ್ದ. ಪೆಂಚಾಲಯ್ಯನನ್ನು ಬಸ್ಸು ಹತ್ತಿಸಿದ ಲೇಪಾಕ್ಷಿ ಮೊದಲ ಬಾರಿಗೆ ಮೇಷ್ಟ್ರ ಮಗನಾಗಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತೆಂದುಕೊಂಡವನು ತಿಂಗಳಿಗೊಮ್ಮೆಯಾದರೂ ಇಂಥ ಒಬ್ಬೊಬ್ಬ ಶಿಷ್ಯ ಮನೆಗೆ ಬರಬಾರದೇ ಎಂದುಕೊಂಡು ಊರಿಗೆ ಬಸ್ಸು ಹತ್ತಲು ಸಿವಿಲ್ ಬಸ್‌ಸ್ಟ್ಯಾಂಡ್ ಕಡೆ ಹೆಜ್ಜೆ ಹಾಕಿದ್ದ ಬಲು ಲಗುಬಗೆಯಿಂದ. ದಾರಿ ಮಧ್ಯದಲ್ಲಿ ದಂಡಿಮಾರೆಮ್ಮ ಮಿಲ್ಟ್ರಿ ಹೋಟೆಲ್ ಕಣ್ಣಿಗೆ ಬಿದ್ದಿತ್ತು. ಭಾನುವಾರವಾದ್ದರಿಂದ ಘಮಘಮ ಘಮಲು ಸ್ವಲ್ಪ ಜೋರಾಗಿಯೇ ಇತ್ತು. ಬೇಡ ಬೇಡವೆಂದರೂ ಕಾಲುಗಳು ಆ ಕಡೆ ಸಡನ್ನಾಗಿ ಕಿತ್ತುಕೊಂಡು ಹೋಗಿದ್ದವು. ಒಳಗೆ ಹೋದವನು ಒಂದು ಪ್ಲೇಟ್ ಕೈಮದ ಜೊತೆಗೆ ಎರಡು ಚಪಾತಿ ಹೇಳಿದ. ಕೈಮ ಗೊಜ್ಜು ಖಾರ ಖಾರವಾಗಿ ಮಜವಾಗಿತ್ತು. ಎರಡು ಪ್ಲೇಟ್ ಕೈಮ, ಒಂದು ಚಿಲ್ಲಿ ಚಿಕನ್ ಪಾರ್ಸೆಲ್ ಮಾಡಿಸಿಕೊಂಡು ಹೆಂಡತಿಗೆ ಫೋನ್ ಮಾಡಿದ್ದ. ಮನೆಗೆ ಹೋಗಿ ಮೇಷ್ಟ್ರುಗೆ ಒಂದೂವರೆ ಪೆಗ್ ಬ್ರಾಂದಿ ಬಿಸಿನೀರಿನಲ್ಲಿ ಬೆರೆಸಿ ಕುಡಿಸಿ, ಕೈಮ ಗೊಜ್ಜಿನಲ್ಲಿ ಅನ್ನ ತಿನ್ನಿಸಿ ಪೆಂಚಾಲಯ್ಯನು ಮಾಡುವ ಘನ ಸನ್ಮಾನದ ಬಗ್ಗೆ ಹೇಳಿದ್ದ. ಮೇಷ್ಟ್ರು ಬ್ರಾಂದಿ ಮತ್ತು ಕೈಮದ ಸಂಯೋಜನೆಯುಂಟಾದ ಸಂಘರ್ಷದಿಂದ ಹೊರಬಿದ್ದ ನೀರುಗೊಣ್ಣೆಯನ್ನು ರಗ್ಗಿನಿಂದ ಒರೆಸಿಕೊಳ್ಳುತ್ತಾ ಪೆಂಚಾಲಯ್ಯನನ್ನು ಇನ್ನಿಲ್ಲದಂತೆ ಕೊಂಡಾಡುತ್ತಿರುವಾಗ ಒಳಗೆ ಅಡುಗೆ ಮನೆಯಲ್ಲಿ ಸೊಸೆ ತಾನೂ ನಾಲ್ಕು ಮುಚ್ಚಳ ಬ್ರಾಂದಿಯನ್ನು ಬಿಸಿನೀರಿನಲ್ಲಿ ಬೆರೆಸಿ ಗಂಟಲಲ್ಲಿ ಹೊಯ್ದುಕೊಂಡು ಕೈಮದ ಉಂಡೆಯನ್ನು ನಮಿಲಿ ನುಂಗಿ, ಗೊಜ್ಜನ್ನು ಪರಮ ಪ್ರೀತಿಯಿಂದ ನೆಕ್ಕತೊಡಗಿದ್ದಳು.

ಬುಧವಾರ ಬೆಳಗ್ಗೆ ಹನ್ನೊಂದು ಗಂಟೆಗೆ ಪೆಂಚಾಲಯ್ಯ ಆಫೀಸಿನ ಹೊರಗೆ ಗೇಟಿನಲ್ಲಿ ದೇವೆಗೌಡನ ಜೊತೆ ಗುರು ಸಾಕ್ಷಾತ್ ಪರಬ್ರಹ್ಮರಾದ ಗುರುಲಿಂಗಪ್ಪನವರಿಗಾಗಿ ಆತುರ ಕುತೂಹಲಗಳಿಂದ ಕಾಯುತ್ತಿದ್ದ. ಕಡೆಗೂ ಕಾರೊಂದು ಬಂದು ನಿಂತು ಅದರ ಮುಂದಿನ ಡ್ರೈವರ್ ಪಕ್ಕದ ಸೀಟಿನಿಂದ ಮೇಷ್ಟ್ರು ಮಗ ಲೇಪಾಕ್ಷಿ ಇಳಿದು ಹಿಂದಿನ ಸೀಟಿನಲ್ಲಿ ಕುಳಿತಿದ್ದ ಮೇಷ್ಟ್ರನ್ನು ಮತ್ತು ಹೆಂಡತಿಯನ್ನು ಇಳಿಸಿಕೊಂಡಿದ್ದ. ಮೇಷ್ಟ್ರು ಖುಷಿಯಿಂದ ಮಗ ಮತ್ತು ಸೊಸೆಯ ಭುಜಗಳ ಮೇಲೆ ಕೈ ಇಟ್ಟುಕೊಂಡು ನಡೆದು ಬರುತ್ತಿದ್ದರು. ಪೆಂಚಾಲಯ್ಯ ಮತ್ತು ದೇವೇಗೌಡ ಕೈಮುಗಿದು ಸ್ವಾಗತಿಸಿದ್ದರು. ಮೇಷ್ಟ್ರು ಪೆಂಚಾಲಯ್ಯನನ್ನು ನೋಡಿ ಆನಂದತುಂದಿಲರಾದರು. ಪೆಂಚಾಲಯ್ಯನ ಕೆಲವು ಸಹೋದ್ಯೋಗಿಗಳು, "ಏನು ಪೆಂಚಾಲಯ್ಯ ನಿಮ್ಮ ತಂದೆಯವರಾ?" "ಏನ್ರಿ ಪೆಂಚಾಲಯ್ಯ ಊರಿಂದ ತಂದೆಯವರು ಬಂದಂಗಿದೆ?" ಎಂದು ಕೇಳುತ್ತಿದ್ದರು. ನಗುತ್ತಾ ಪೆಂಚಾಲಯ್ಯ "ನಮ್ಮೇಷ್ಟ್ರು..." "ನಮ್ಮ ಗುರುಗ್ಳು..." ಮುಂತಾಗಿ ಉತ್ತರಿಸುತ್ತಾ ಮೇಷ್ಟ್ರು ಮಹದೇವಪ್ಪನವರನ್ನು ಅಡಿಷನಲ್ ಕಮಿಷನರ್ ರಾಜೇಂದ್ರ ಪ್ರಸಾದರ ಚೇಂಬರಿಗೆ ಕರೆದುಕೊಂಡು ಹೋಗಿದ್ದ. ರಾಜೇಂದ್ರ ಪ್ರಸಾದರು ಎದ್ದು ನಿಂತು ಮಹದೇವಪ್ಪ ಮೇಷ್ಟ್ರನ್ನು ಸ್ವಾಗತಿಸಿ ಸೋಫಾದ ಮೇಲೆ ಕೂರಿಸಲು ಹೇಳಿದ್ದರು. ಲೇಪಾಕ್ಷಿ